Goverment is at is. ನಿಮಗೆ ಒಂದೂವರೆ ವರ್ಷದ ಸರ್ಟಿಫಿಕೇಟ್ ಕೋರ್ಸ್‌ನ್ನು ಮಾಡುತ್ತೇವೆ, ಯಾವುದೇ ಹೆಸರಿನಲ್ಲಿ ಮಾಡಿದರೂ ಅದು ನಿಮಗೆ ಅನುಕೂಲವಾಗುವಂತೆ ಮಾಡುತ್ತೇವೆಂದು ಹೇಳಿದ ಮೇಲೆ ಹುಡುಗರು ಒಪ್ಪಿಕೊಂಡು ಹೋದರು. ಹೋಗುವಷ್ಟರಲ್ಲಿ ಆ ಹುಡುಗರು ಗೌವರ್ನಮೆಂಟ್ ಆರ್ಡರ್ ಕೊಡಿ ಎಂದು ಕೇಳಿದರು. ಆ ಗೌವರ್ನಮೆಂಟ್ ಆರ್ಡರನ್ನು ನಾನು ಕೊಡುವುದಕ್ಕೆ ಆಗುತ್ತದೆಯೇ ? ದಯಾನಂದ ಅವರೂ ಬಂದಿದ್ದರು. ಎಷ್ಟು ವಿನಂತಿ ಮಾಡಿಕೊಂಡರು ಹುಡುಗರಿಗೆ ಅರ್ಥವಾಗುತ್ತಿಲ್ಲ. ಹೇಳಿದ ಮಾತನ್ನು ಕೇಳುತ್ತಿರಲಿಲ್ಲ. ಪರಿಸ್ಥಿತಿ ಅಷ್ಟರವರೆಗೆ ಹೋಗಬಾರದಾಗಿತ್ತು.

ಶ್ರೀ ವಾಟಾಳ್ ನಾಗರಾಜ್.—ಅವರನ್ನು ಮತ್ತೆ ಕರೆಸಿ ಮಾತನಾಡಿ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನಮಗೇನು ಅದು ಪ್ರಿಸ್ಟೀಜ್ ಕ್ವೆಶ್ಚನ್ ಅಲ್ಲ. ಈಗಲೂ ಅವರನ್ನು ಕರೆಸಿ ಮಾತನಾಡುತ್ತೇನೆ.

ಗಮನ ಸೆಳೆಯಂಮ ಸೂಚನೆ

ರಾಜ್ಯದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಅಭಾವದಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಿರುವ ಬಗ್ಗೆ

ಶ್ರೀ ಆರ್. ಎಲ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಅಭಾವದಿಂದ ಉಂಟಾಗಿರುವ ತೊಂದರೆಯ ಬಗ್ಗೆ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಟಿ.ಎನ್.ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರುಗಳಾದ ಎಲ್. ಆರ್ ಶಿವರಾಮೇಗೌಡರು, ಎಂ. ಎಸ್. ಆತ್ಮಾನಂದರವರು, ಹೆಚ್.ಎಂ. ರೇವಣ್ಣನವರು, ರಾಮಲಿಂಗರೆಡ್ಡಿ ಯವರು ಮತ್ತು ಮಾನ್ಯ ಎಂ.ವಿ. ವೆಂಕಟಪ್ಪನವರು ಸೇರಿ ಒಟ್ಟಾರೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕಂಥ ಈ ಸೂಚನೆಗೆ ಸರ್ಕಾರದ ಉತ್ತರ ಈ ರೀತಿ ಇದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಎಂ.ವಿ. ವೆಂಕಟಪ್ಪನವರ ಹೆಸರನ್ನು ಮಂತ್ರಿಗಳು ವಿತಕ್ಕೆ ಸೇರಿಸಬೇಕು.

ಅಧ್ಯಕ್ಷರು.—ಅವರ ಹೆಸರು ಇಲ್ಲಿದೆ. ನಾನು ಸೇರಿಸಿದ್ದೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿರತಕ್ಕಂಥ ಈ ಒಂದು ಸೂಚನೆಯ ಬಗ್ಗೆ ಸರ್ಕಾರದ ಉತ್ತರ ಈ ರೀತಿ ಇದೆ.

ಪೆಟ್ರೋಲ್ ಮತ್ತು ಡಿಸೇಲ್‌ನ ಹಂಚಿಕೆ ಮತ್ತು ವಿತರಣೆ, ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿದೆ. ಇಂಡಿಯನ್ ಆಯಿಲ್ ಕಾರ್ಪೊರೇಶನ್ ಚೀಫ್ ಡಿವಿಜನಲ್ ಮ್ಯಾನೇಜರ್, ಬೆಂಗಳೂರು ಇವರನ್ನು ರಾಜ್ಯಮಟ್ಟದ ಸಮನ್ವಯ ಅಧಿಕಾರಿಯನ್ನಾಗಿ, ಭಾರತ ಸರ್ಕಾರವು ನಾಮನಿರ್ದೇಶನ ಮಾಡಿದೆ. ಇವರು ನೀಡಿರುವ ಮಾಹಿತಿಯ ಪ್ರಕಾರ ರಾಜ್ಯಕ್ಕೆ ಪೆಟ್ರೋಲ್ ಹಂಚಿಕೆ ಪ್ರಮಾಣವನ್ನು ಮೊತಾ ಮಾಡಿರುವುದಿಲ್ಲ. ವಾಸ್ತವವಾಗಿ ಕಳೆದ ವರ್ಷದ ಎತ್ತುವಳಿಗೆ ಹೋಲಿಸಿದರೆ ಈ ಸಾರಿ ಶೇ. ೪ ರಷ್ಟು ಹೆಚ್ಚಾಗಿದೆ. ಪೆಟ್ರೋಲಿನ ಅಭಾವ ಇರುವುದಿಲ್ಲ ಗ್ರಾಹಕರು ಗಾಬರಿಗೊಂಡು ಪೆಟ್ರೋಲನ್ನು ಖರೀದಿಸುವಿಕೆ ಈಗ ತಲೆದೋರಿರುವ ಪೆಟ್ರೋಲಿನ ಅಭಾವಕ್ಕೆ ಕಾರಣವಾಗಿದೆ.

ರಾಜ್ಯದಲ್ಲಿ ಡಿಸೇಲ್‌ನ ಅಭಾವದ ಬಗ್ಗೆ ಹೇಳುವುದಾದರೆ ಹಿಂದಿನ ವರ್ಷಗಳ ಎತ್ತುವಳಿಗಿಂತ (Lifting) ಶೇ.೧೦ ರಷ್ಟು ಕಡಿತವನ್ನು ದಿನಾಂಕ ೦೧.೧೧.೯೦ರಿಂದ ಭಾರತ ಸರ್ಕಾರವು ವಿಧಿಸಿದೆ. ಸಾಧಾರಣವಾಗಿ ಹಿಂದಿನ ವರ್ಷದ ಎತ್ತುವಳಿಗಿಂತ ಅನುರೂಪವಾಗಿ ಪೆಟ್ರೋಲ್ ಉತ್ಪನ್ನಗಳನ್ನು ಅದರ ಉತ್ಪತ್ತಿಯ ಶೇ. ೧೦ರಿಂದ ೧೫ರ ದರದಲ್ಲಿ ಪೆಚ್ಚಿಗೆ ಬಿಡುಗಡೆ ಮಾಡಲಾಗುತ್ತಿತ್ತು. ಆದರೆ ೧.೧೧.೯೦ರಿಂದ ಶೇ.೧೦ ರಷ್ಟು ಕಡಿತ ಮಾಡಿರುವುದರಿಂದ ಒಟ್ಟಾರೆ ಕ್ಷ. ೨೦ರಷ್ಟು ಕಡಿತ ಉಂಟಾಗಿದೆ. ೧೯೯೦ ಆಗಸ್ಟ್ ಮಾಹೆಯಲ್ಲಿ ಲಿಂಗಸೂಗೂರು ಮೆಟ್ರಿಕ್ ಟನ್ ಡೀಸೆಲ್ ಅನ್ನು ಹಂಚಿದ್ದು ಅಕ್ಟೋಬರ್ ೧೯೯೦ರಲ್ಲಿ ೭೪೫೩೨ ಮೆಟ್ರಿಕ್ ಟನ್‌ಗಳಿಗೆ ಇಳಿಸಲಾಗಿದೆ.

ಪೆಟ್ರೋಲ್ ಮತ್ತು ಡೀಸೆಲ್‌ಗಳಿಗೆ ಸೀಮೆಎಣ್ಣೆ ಮಾಗೂ ಇತರೆ ಮೊದಲಿನ ವಸ್ತುಗಳನ್ನು ಕಲಬೆರಕೆ ಮಾಡುವುದಕ್ಕೆ ಸಂಬಂಧಿಸಿದಂತೆ ಅದನ್ನು ತಡೆಗಟ್ಟಲು ಭಾರತ ಸರ್ಕಾರವು ಆಗತ್ಯ ವಸ್ತುಗಳ ಕಾಯ್ದೆ ಅಡಿಯಲ್ಲಿ ಆದೇಶವನ್ನು ಹೊರಡಿಸಿದೆ. ಅದರಂತೆ ಮೋಟಾರ್ ಸ್ಪಿರಿಟ್ ಮತ್ತು ಹೈಸ್ಪೀಡ್

ಡೀಸಲ್ (ಪ್ರಿವೆನ್‌ಶನ್ ಆಫ್ ಮಾಲ್–ಪ್ರಾಕ್ಟೀಸಸ್ ಇನ್ ಸಪ್ಲೈ ಅಂಡ್ ಡಿಸ್ಟ್ರಿಬ್ಯೂಶನ್) ಆದೇಶ ೧೯೯೦ನ್ನು ಕೇಂದ್ರ ಸರ್ಕಾರವು ದಿನಾಂಕ ೨೨.೯.೯೦ರಂದು ಹೊರಡಿಸಿದ್ದು ಅದು ಗೆಜೆಟ್ ಆಫ್ ಇಂಡಿಯಾದಲ್ಲಿ ದಿನಾಂಕ ೨೫.೯.೯೦ ರಂದು ಪ್ರಕಟಗೊಂಡಿದೆ.

ಸದರಿ ಆದೇಶದಂತೆ ರಾಜ್ಯದಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ನಿರೀಕ್ಷಕರು ಮತ್ತು ಆದಕ್ಕೆ ಮೇಲ್ಪಟ್ಟ ದರ್ಜೆಯ ರಾಜ್ಯದ ಯಾವುದೇ ಅಧಿಕಾರಿಗಳಿಗೆ ಶೋಧನೆ ಮತ್ತು ಜಪ್ತಿ ಮಾಡುವ ಅಧಿಕಾರವನ್ನು ರಾಜ್ಯ ಸರ್ಕಾರವು ನೀಡಬೇಕಾಗಿದೆ. ಸದರಿ ಆದೇಶ ಕಲಂ (೭) ರ ಮೇರೆಗೆ ಸದರಿ ಅಧಿಕಾರಿಗಳನ್ನು ಸೂಚಿಸುವ ದಿಸೆಯಲ್ಲಿ ಕ್ರಮತೆಗೆದುಕೊಳ್ಳಲಾಗುತ್ತಿದೆ. ಇನ್ನು ಒಂದೆರಡು ದಿನಗಳಲ್ಲಿ ಈ ಬಗ್ಗೆ ಅಧಿಸೂಚನೆಯನ್ನು ಹೊರಡಿಸಲಾಗುವುದು. ಕರ್ನಾಟಕ ಹೈಸ್ಪೀಡ್ ಡೀಸಲ್ (ಮೇಯಿಂಟೆನನ್ಸ್ ಆಫ್ ಸಪ್ಲೈಸ್ ಅಂಡ್ ಡಿಸ್ಟ್ರಿಬ್ಯೂಶನ್) ಆದೇಶ ೧೯೯೦ ರಡಿಯಲ್ಲಿ ಅಧಿಕಾರವನ್ನು ಚಲಾಯಿಸಿ ಅಕ್ರಮ ದಾಸ್ತಾನನ್ನು ಹೊರತೆಗೆಯುವ ಮತ್ತು ಸಮಾನಾಗಿ ಹೈಸ್ಪೀಡ್ ಡೀಸಲನ್ನು ಹಂಚುವ ಮತ್ತು ದೊರೆಯುವಂತೆ ಮಾಡುವ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಅಗತ್ಯ ಸೂಚನೆಗಳನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ. ಸದರಿ ಆದೇಶದ ಕಲಂ ೪ (೧)ರ ಮೇರೆಗೆ ವರ್ತಕರಿಂದ ವಿವಿಧ ವರ್ಗದ ವ್ಯಕ್ತಿಗಳಿಗೆ ಹೈಸ್ಪೀಡ್ ಡೀಜಲನ್ನು ನೀಡುವ ಪ್ರಮಾಣವನ್ನು ಗೊತ್ತು ಪಡಿಸುವ ದಿಸೆಯಲ್ಲಿ ರಾಜ್ಯಸರ್ಕಾರವು ಆಲೋಚಿಸುತ್ತಿದೆ. ಪ್ರಮಾಣವನ್ನು ನಿಗದಿಪಡಿಸುವ ಸಂದರ್ಭದಲ್ಲಿ ಅಗತ್ಯ ವಸ್ತುಗಳ ಸಾಗಣೆ, ವ್ಯವಸಾಯ ಮತ್ತು ಖಾಸಗಿ ಉದ್ಯೋಗಗಳು, ಸಾರ್ವಜನಿಕ ಸಾಗಣೆ ವ್ಯವಸ್ಥೆಗಳಿಗೆ ಆದ್ಯತೆ ನೀಡಲಾಗುವುದು. ರಾಜ್ಯಕ್ಕೆ ಹಂಚುವ ಡೀಸಲನ್ನು ಸ್ವಲ್ಪ ಹೆಚ್ಚಿಸಲು ಕೇಂದ್ರ ಸರ್ಕಾರವನ್ನೂ ಸಹ ಕೋರಲಾಗುವುದು.

† ಶ್ರೀ ಎಲ್.ಆರ್. ಶಿವರಾಮೇಗೌಡ.–ಮಾನ್ಯ ಅಧ್ಯಕ್ಷರೇ ಪೆಟ್ರೋಲ್ ಮತ್ತು ಡೀಸಲ್ ಅನ್ನು ಕೇಂದ್ರ ಸರ್ಕಾರ ಕೊಡುತ್ತಿರುವ ಬಗ್ಗೆ ಮಾನ್ಯ ಮಂತ್ರಿಗಳು ತಮಗೆ ತಿಳಿದಿರುವ ಮಾಹಿತಿ ಪ್ರಕಾರ ತಿಳಿಸಿದ್ದಾರೆ. ಇವರೆ ಡೀಸಲ್ ಅಭಾವ ಏನು ತಲೆದೋರಿದೆ ಅದನ್ನು ತಿಳಿದುಕೊಂಡು ಕೆಲವು ಬಂಕ್‌ಗಳಲ್ಲಿ ಪೆಟ್ರೋಲ್ ಅಭಾವ ಕೂಡ ಇದೆ ಎಂದು ಅದನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಾಟ ಮಾಡಲಾಗುತ್ತಿದೆ. ಮಾನ್ಯ ಮಂತ್ರಿಗಳು ತಮ್ಮ ಹೇಳಿಕೆ ಪ್ರಕಾರ ೨೦ ಪರ್ಸೆಂಟ್ ಡೀಸಲ್ ಕಡಿಮೆಯಾಗಿದೆ ಎಂದು ತಿಳಿಸಿದ್ದಾರೆ. ಆಗಸ್ಟ್ ತಿಂಗಳಲ್ಲಿ ೮೪೦೫೫ ಮೆಟ್ರಿಕ್ ಟನ್ ಡೀಸಲ್ ಅನ್ನು ಅಕ್ಟೋಬರ್ ತಿಂಗಳಲ್ಲಿ ೭೪೫೭೨ ಮೆಟ್ರಿಕ್ ಟನ್ ಡೀಸಲ್ ಅನ್ನು ರಾಜ್ಯಕ್ಕೆ ಸರಬರಾಜು ಮಾಡಿದ್ದೇವೆಂದು ತಿಳಿಸಿದ್ದಾರೆ, ಇಲ್ಲಿ ಇರತಕ್ಕ ವ್ಯತ್ಯಾಸ ಕೇವಲ 6 ಸಾವಿರ ಮೆಟ್ರಿಕ್ ಟನ್‌ಗಳು ಆದರೆ ರಾಜ್ಯದಲ್ಲಿ ಶೇಕಡ 50 ಭಾಗ ಡೀಸಲ್ ಕಡಿಮೆ ಆಗಿದೆಯೇನೋ ಎನ್ನುವ ಪಾಟ್ಟಿಗೆ ಎಲ್ಲಾ ಅಭಿವೃದ್ಧಿ ಕಾರ್ಯಗಳು ಮತ್ತು ಕೈಗಾರಿಕೆಗಳು ಸ್ಥಗಿತವಾಗಿವೆ, ೨೦ ಪರ್ಸೆಂಟ್ ಡೀಸಲ್ ಕಡಿಮೆ ಆಗಿದೆ ಎಂದು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದರೂ, ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಲೀಟರ್ ಡೀಸಲ್‌ಗೆ ೧೨ ರೂಪಾಯಿನಂತೆ ಮಾರಾಟ ಮಾಡುತ್ತಿದ್ದಾರೆ. ಹತ್ತು ಸಾವಿರ ಲೀಟರ್ ಡೀಸಲ್ ಅನ್ನು ತರಿಸಿದರೆ ಅದರಲ್ಲಿ ೨ ಸಾವಿರ ಲೀಟರ್ ಅನ್ನು ಜನರಿಗೆ ಕಾಣುವಂತೆ ಕೊಡುತ್ತಾರೆ. ಇನ್ನು ಉಳಿದ ೪ ಸಾವಿರ ಲೀಟರನ್ನು ತಮಗೆ ಬೇಕಾದ ರೀತಿಗೆ ಬ್ಯಾರಲ್‌ನಲ್ಲಿ ತುಂಬಿ ಕಳುಹಿಸುತ್ತಾರೆ, ಅದನ್ನು ಬೇರೆ ಅಂಗಡಿಗಳಲ್ಲಿ ಇಟ್ಟು ತಮ್ಮ ವಿಜಿಂಟರುಗಳ ಮೂಲಕ ಕಾಳಸಂತೆಯಲ್ಲಿ ಲೀಟರ್ ಒಂದಕ್ಕೆ ೧೨ ರೂಪಾಯಿನಂತೆ ಮಾರಾಟ ಮಾಡುತ್ತಿದ್ದಾರೆ. ಡೀಸಲ್ ಪ್ರಮಾಣ ಕಡಿಮೆ ಆಗಿರುವುದಕ್ಕೆ ಕ್ರಮ ಕೈಗೊಳ್ಳುವುದು ಬೇರೆ ಆದರೆ ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವುದಕ್ಕೆ ಏನು ಮಾಡುತ್ತೀರಿ ಎಂದು ನಾನು ಕೇಳುತ್ತೇನೆ ತಾವು ಇನ್ನು ಒಂದೆರಡು ದಿನಗಳಲ್ಲಿ ಅಧಿಸೂಚನೆ ಹೊರಡಿಸುವುದಾಗಿ ಹೇಳಿದ್ದೀರಿ. ಈ ಬಗ್ಗೆ ತುರ್ತಾಗಿ ವ್ಯವಸ್ಥೆ ಮಾಡಬೇಕು. ಇವತ್ತಿನ ದಿವಸ ಎಲ್ಲಾ ಲಾರಿ ಮಾಲೀಕರು ಮತ್ತು ಲಾರಿ ಆಪರೇಷನ್‌ನವರು ಬಹಳ ಚಿಂತೆಗೆ ಈಡಾಗಿದ್ದಾರೆ. ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿವೆ. ಬಹುಶಃ ಬಂಗಳೂರು ನಗರದಲ್ಲಿ ಇದು ಕಾಣದೆ ಇರಬಹುದು. ಆದರೆ ಈ ಅಭಾವದ ಅವಕಾಶವನ್ನು ಉಪಯೋಗಿಸಿಕೊಂಡು ಬಂಕುಗಳ ಮಾಲೀಕರು ರಾಜ್ಯದ ಹೆದ್ದಾರಿಯಲ್ಲಿರತಕ್ಕವರು ಡೀಸಲ್ ಜೊತೆಗೆ ಸೋಪುಗಳನ್ನು ಮತ್ತು ಅಗರಬತ್ತಿಗಳನ್ನು ಮಾರಾಟ ಮಾಡುತ್ತಿದ್ದಾರೆ.

೧೨.೩೦ ಪಿ.ಎಂ.

ಇವತ್ತು ಬಂಕ್‌ಗಳು ಅಗರಬತ್ತಿ, ಗಾಡಿ ಒರೆಸುವ ಬಟ್ಟೆ ಮಾರುವ ಕೇಂದ್ರಗಳಾಗಿವೆ. ೫ ರೂಪಾಯಿ ಬೆಲೆ ಬಾಳುವ ಅಗರಬತ್ತಿ ಪ್ಯಾಕೆಟ್‌ನ್ನು ೨೦ ರೂಪಾಯಿ ಕೊಟ್ಟು ಕೊಂಡರೆ ೧೦೦ ಲೀಟರ್ ಡೀಸಲ್ ಮಾರಾಟ ಮಾಡುತ್ತೇವೆಂದು ೫ ರೂಪಾಯಿ ಬೆಲೆ ಬಾಳುವ ಗಾಡಿ ಒರೆಸುವ ಬಟ್ಟೆಯನ್ನು ೨೦ರೂ. ಕೊಟ್ಟು ಕೊಂಡರೆ ಡೀಸಲ್ ಕೊಡುವುದಾಗಿ ಹೇಳುತ್ತಿದ್ದಾರೆ. ಈ ಬಗ್ಗೆ ಲಾರಿ ಮಾಲೀಕರ

ಸಂಘದವರು ನನಗೆ ಮನವಿ ಮಾಡಿದ್ದಾರೆ. ಆದ್ದರಿಂದ ಪ್ರತಿದಿನವೂ ಎಷ್ಟು ಬಿಡುಗಡೆಯಾಗಿದೆ, ಎಷ್ಟೂ ಪರ್ಸೆಂಟ್ ವಿತರಣೆಯಲ್ಲಿ ಕಡಿಮೆ ಆಗಿದೆ ಎಂಬುದನ್ನು ಸಾರ್ವಜನಿಕರಿಗೆ ತಿಳಿಸಿ, ಯಾರು ಕಳ್ಳ ಸಂತೆಯಲ್ಲಿ ಮಾರುವುದಕ್ಕೆ ಪ್ರಚೋದನೆ ಮಾಡುತ್ತಿದ್ದಾರೆ ಅವರ ಬಗ್ಗೆ ಕ್ರಮ ಸರ್ಕಾರ ತೀವ್ರ ಕ್ರಮ ತೆಗೆದುಕೊಳ್ಳಬೇಕು ಹಾಗೂ ಉಗ್ರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

† ಶ್ರೀ ಎಂ. ಎಸ್. ಆತ್ಮಾನಂದ.—ಮಾನ್ಯ ಅಧ್ಯಕ್ಷರೇ, ಡೀಸಲ್ ಹಂಚಿಕೆ ಮಾಡುವುದರ ಬಗ್ಗೆ ಕೆಲವೇ ಸಮಯದಲ್ಲಿ ಆಲೋಚನೆ ಮಾಡುತ್ತೇವೆಂದು ಮಂತ್ರಿಗಳು ಹೇಳಿದ್ದಾರೆ. ನಮ್ಮ ಮಂಡ್ಯ ಜಿಲ್ಲೆಯ ಮುಖ್ಯ ಬೆಳೆ ಕಬ್ಬು, ಇಪತ್ತು ಕಬ್ಬು ಸಾಗಾಟ ಮಾಡುವ ಲಾರಿಗಳಿಗೆ ಡೀಸಲ್ ಸಿಗದೇ ಅವು ನಿಂತಿದ್ದು. ಕೊಯ್ದ ಕಬ್ಬು ಬಣಗಿಹೋಗುತ್ತಿದೆ. ಇದರಿಂದ ಆಲ್ಲಿನ ರೈತರಿಗೆ ಬಹಳ ನಷ್ಟವಾಗಿದೆ. ಡೀಸಲ್ ಅಭಾವದಿಂದ ಸಕ್ಕರೆ ಕಾರ್ಖಾನೆ ಕಬ್ಬು ಅರೆಯುವ ಕೆಲಸ ಸ್ಥಗಿತವಾಗಿದೆ. ಆದ್ದರಿಂದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬನ್ನು ಸಾಗಾಣಿಕೆ ಮಾಡುವ ಲಾರಿಗಳಿಗೆ ಡೀಸಲ್‌ನ್ನು ಆದ್ಯತೆ ಮೇಲೆ ಸರಬರಾಜು ಮಾಡುವುದಕ್ಕೆ ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಇಪತ್ತು ಕೆಲವು ರೈತರ ಪಂಪುಸೆಟ್ಟುಗಳಿಗೆ ವಿದ್ಯುತ್‌ದೊರಕದಿದ್ದ ಕಾರಣ ಅವರು ಡೀಸಲ್‌ಗೆ ಮೊರೆಹೋಗಿದ್ದಾರೆ. ಇಂತಹ ರೈತರಿಗೆ ಆದ್ಯತೆ ಮೇಲೆ ಡೀಸಲ್ ಸರಬರಾಜು ಮಾಡುವುದಕ್ಕೆ ಸರ್ಕಾರ ಕೂಡಲೇ ಕ್ರಮ ತೆಗೆದು ಕೊಳ್ಳಬೇಕು ಇವತ್ತು ಪೆಟ್ರೋಲ್ ಅಭಾವ ಇಲ್ಲ ಎಂದಿದ್ದಾರೆ. ಈ ಅಭಾವ ಬೆಂಗಳೂರಿನಲ್ಲಿ ಇಲ್ಲದೇ ಇರಬಹುದು. ಬೆಂಗಳೂರು ಹೊರತುಪಡಿಸಿ ಉಳಿದ ಎಲ್ಲಾ ಕಡೆ ಪೆಟ್ರೋಲಿಗೂ ಗಂಟೆಗಟ್ಟಲೇ ಕ್ಯೂ ನಿಲ್ಲಬೇಕಾದ ಸ್ಥಿತಿ ಇದೆ. ಮಾನ್ಯ ಶಿವರಾಮೇಗೌಡರು ಹೇಳಿದ ಹಾಗೆ ಲಾರೀಮಾಲೀಕರ ಸಂಘವಲ್ಲಿ ನಾನೂ ಕೂಡಾ ಅಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದೇನೆ. ಈ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಜೊತೆ ಸರ್ಕಾರ ಸಮಾಲೋಚನೆ ಮಾಡಿ ಪರಿಸ್ಥಿತಿಯನ್ನು ಬಗೆಹರಿಸುವ ದೃಷ್ಟಿಯಲ್ಲಿ ಪ್ರಯತ್ನ ಮಾಡಬೇಕಾಗಿದೆ. ಲಾರೀ ಮಾಲೀಕರ ಸಂಘದ ಪದಾಧಿಕಾರಿಗಳನ್ನು ಕರೆದು ಈ ಸಮಸ್ಯೆ ಬಗ್ಗೆ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ತಾವು ಆಲೋಚನೆ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಪೆಚ್. ಎಂ. ರೇವಣ್ಣ.—ಮಾನ್ಯ ಅಧ್ಯಕ್ಷರೇ, ಡೀಸೆಲ್ ಅಭಾವದ ಬಗ್ಗೆ ಇನ್ನು ಎರಡು ದಿವಸಗಳಲ್ಲಿ ಪರಿಹಾರ ಕಂಡುಹಿಡಿಯುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಇವತ್ತು ೨೦ ಪರ್ಸೆಂಟ್ ಡೀಸೆಲ್ ಸಪ್ಲೈ ಕಡಿಮೆಯಾಗಿದ್ದರೂ ಕೂಡಾ ಬಂಕ್‌ಗಳ ಮುಂದೆ ನೂರಾರು ಲಾರಿಗಳು ಸಾಲಾಗಿ ನಿಂತಿರುವುದನ್ನು ನಾವು ನೋಡುತ್ತಿದ್ದೇವೆ. ಇದಕ್ಕೆ ಕೆಲವರು ಡೀಸೆಲ್‌ನ್ನು ದಾಸ್ತಾನು ಮಾಡಿಕೊಂಡಿರುವುದೇ ಕಾರಣ ಎಂದು ಕಾಣುತ್ತದೆ. ಆದ್ದರಿಂದ ದಾಸ್ತಾನು ಮಾಡಿಕೊಂಡಿರುವ ಡೀಸೆಲ್‌ನ್ನು ಹೊರತರಿಸುವ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಲಿಂಗರೆಡ್ಡಿ.—ಮಾನ್ಯ ಅಧ್ಯಕ್ಷರೇ, ಡೀಸೆಲ್ ಅಭಾವದಿಂದ ಗ್ರಾಮಾಂತರ ಪ್ರದೇಶದಂತೆ ನಮ್ಮ ಬೆಂಗಳೂರು ನಗರಕ್ಕೂ ಕೂಡಾ ಬಹಳ ತೊಂದರೆಯಾಗಿದೆ. ಇವತ್ತು ನಗರದ ಪೆಟ್ರೋಲ್ ಬಂಕ್‌ಗಳ ಮುಂದೆ ಮೈಲಿಗಟ್ಟಲೆ ಲಾರಿಗಳ ಸಾಲು ನಿಂತಿದ್ದು ಇದರಿಂದ ನಗರದ ಸಂಚಾರ ವ್ಯವಸ್ಥೆ ಅಸ್ತವ್ಯಸ್ತಗೊಂಡಿದೆ. ಡೀಸೆಲ್ ಅಭಾವದಿಂದ ಲಾರಿಗಳು ಓಡಾಡುತ್ತಿಲ್ಲ. ನಗರದಲ್ಲಿ ಮನೆ ಕಟ್ಟುತ್ತಿರುವ ಜನರಿಗೆ ಇದರಿಂದ ಬಹಳ ತೊಂದರೆಯಾಗಿದೆ. ಮನೆಗೆ ಬೇಕಾದ ಮರಳು, ಇಟ್ಟಿಗೆ ತರುತ್ತಿದ್ದ ಲಾರಿಗಳು ನಿಂತಿದ್ದು. ಈ ಎಲ್ಲಾ ಮನೆಸಾಮಾನುಗಳಿಗೂ ಇವತ್ತು ಹೆಚ್ಚು ಬೆಲೆ ತರಬೇಕಾಗಿದೆ. ಒಂದು ಲಾರಿ ಮರಳಿನ ಬೆಲೆ ೫೦೦ ಇದ್ದರೆ ಇವತ್ತು ಇದರ ಬೆಲೆ ೧೮೦ ರಿಂದ ೨೦೦ ರೂಪಾಯಿಗಳಷ್ಟು ಹೆಚ್ಚಾಗಿದೆ. ಇಟ್ಟಿಗೆ ಬೆಲೆ ಜಾಸ್ತಿಯಾಗಿದೆ. ಈ ಬಗ್ಗೆ ಶೀಘ್ರವೇ ನಿವಾರಣೋಪಾಯಗಳನ್ನು ಕಂಡುಹಿಡಿಯಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೇ, ಕಳೆದ ೨-೩ ದಿವಸಗಳಿಂದ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಜಾಸ್ತಿಯಾಗುತ್ತದೆಂಬ ಪುಕಾರು ಎದ್ದಿದೆ. ಮತ್ತೆ ಪೆಟ್ರೋಲ್ ಮತ್ತು ಡೀಸೆಲನ್ನು ರೇಷನಿಂಗ್ ಮಾಡುತ್ತಾರಂತೆ. ಇದು ನಿಜವೇ ಎಂದು ನಾನು ಸರ್ಕಾರವನ್ನು ಕೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ, ಡೀಸೆಲ್‌ಗಾಗಿ ನಾನೇ ಖುದ್ದಾಗಿ ಹೋಗಿ ನನ್ನ ಕಾರನ್ನು ಸುಮಾರು ಗಂಟೆ ಕ್ಯೂನಲ್ಲಿ ನಿಲ್ಲಿಸಿಕೊಂಡಿದ್ದು ಆವತ್ತಿನ ದಿವಸ ಡೀಸೆಲ್ ಇಲ್ಲವೆಂದು ವಾಪಸ್ ಬಂದೆ. ಬೆಂಗಳೂರಿನಿಂದ ನನ್ನ ಕೇತ್ರಕ್ಕೆ ಹೋಗಿ ಬರಬೇಕಾದರೆ ಸಾಧ್ಯವೇ ಇಲ್ಲದಂತಹ ಪರಿಸ್ಥಿತಿ ಉಂಟಾಗಿದೆ. ನಮ್ಮ ಕಾರಿಗಾದರೂ ಮಾನ್ಯ ನರಸಿಂಹ ಮೂರ್ತಿಯವರು ಡೀಸೆಲ್ ವ್ಯವಸ್ಥೆ ಮಾಡಿಸಿ ವುದಾದರೆ ಊರಿಗೆ ಹೋಗಿ ಜನಗಳ ಮುಖ ನೋಡಿಕೊಂಡು ಬರಬಹುದು.

ಶ್ರೀ ವಾಟಾಳ್ ನಾಗರಾಜ್.—ಕೇಂದ್ರ ಸರಕಾರ ಈ ಡೀಸೆಲ್ ಸಮಸ್ಯೆಯನ್ನು ಬಗೆಹರಿಸಲಿಲ್ಲ ವೆಂದು ಹೇಳಿದರೆ ರಾಜ್ಯ ಸರಕಾರದ ಪರವಾಗಿ ಒಂದು ನಿಯೋಗ ಹೋಗಿ ಸಾಕಷ್ಟು ಪ್ರಮಾಣದಲ್ಲಿ ಡೀಸೆಲ್ ಅನ್ನು ನಮಗೆ ಕೊಡಬೇಕೆಂಬ ಒತ್ತಾಯವನ್ನು ಹೇರಬೇಕೆಂಬ ಉದ್ದೇಶವನ್ನು ಏನಾದರೂ ಇಟ್ಟು ಕೊಂಡಿದ್ದೀರಾ ? ಅಲ್ಲಿ ಕೇಂದ್ರ ಸರಕಾರವೇ ಇಲ್ಲವೇನೋ ಎನ್ನುವ ಸ್ಥಿತಿಯಾಗಿದೆ. ದೂರವಾಣಿ ಇಲಾಖೆಯವರು ಸ್ಟ್ರೈಕ್ ಮಾಡಿದ್ದಾರೆ ಅವರನ್ನು ಕೇಳುವವರು ಇಲ್ಲ. ನಮ್ಮ ದೃಷ್ಟಿಯಲ್ಲಿ ಕೇಂದ್ರ ಸರಕಾರ ಇಲ್ಲವೇ ಇಲ್ಲ ; ನಿರ್ಜೀವವಾಗಿದೆ.

ಅಧ್ಯಕ್ಷರು.—ಕೇಂದ್ರ ಸರಕಾರ ಎಲ್ಲಿರಬೇಕೋ ಅಲ್ಲಿ ಇದೆ ; ಎಲ್ಲಿ ಇದೆ ಎಂದು ಕೇಳಿದರೆ ಹೇಗೆ ?

ಶ್ರೀ ವಾಟಾಳ್ ನಾಗರಾಜ್.—ಅದಕ್ಕೆ ಜೀವ ಇಲ್ಲ ಅಲ್ಲಿನ ಆಡಳಿತ ದುರ್ಬಲವಾಗಿದೆ, ಕೆಟ್ಟಿದೆ ; ಸಮಗ್ರವಾಗಿ ಕೆಟ್ಟಿದೆ : ಆದರ ಬಗ್ಗೆ ಯಾರೂ ಸಹ ಅನುಮಾನ ಪಡಬೇಕಾಗಿಲ್ಲ. ಡೀಸೆಲ್ ಅಭಾವ, ದೂರವಾಣಿ ಇಲಾಖೆಯವರ ಸತ್ಯಾಗ್ರಹ ಆಗುತ್ತಿದೆ. ಇಂತಹ ಪರಿಸ್ಥಿತಿಯಿರುವಾಗ ಕೇಂದ್ರ ಎಲ್ಲಿ ಇದೆ ? ಇದೆಲ್ಲಾ ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟಿದ್ದು.

ಅಧ್ಯಕ್ಷರು.—ಡೀಸೆಲ್‌ಗೂ ದೂರವಾಣಿಗೂ ಏನು ಸಂಬಂಧ ಹೇಳಿ.

ಶ್ರೀ ವಾಟಾಳ್ ನಾಗರಾಜ್.—ಕೇಂದ್ರ ಸರಕಾರಕ್ಕೆ ಇವೆರಡೂ ಸೇರಿದೆ. ಅವರು ಇದರ ಬಗ್ಗೆ ಎಚ್ಚರ ಸಹಿಸಿಲ್ಲದಿರುವ ಕಾರಣ ಆಡಳಿತ ಕುಸಿದು ಬಿದ್ದಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ರಾಜ್ಯದಲ್ಲಿರತಕ್ಕಂತಹ ಪೆಟ್ರೋಲ್, ಡೀಸೆಲ್ ಅಭಾವದ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ಇದಕ್ಕೆ ಅವರ ಸಹಿ ಇಲ್ಲ. ಇದನ್ನು ಅಧಿಕಾರಿಗಳು ಮಾಡಿ ಕಳಿಸಿದ್ದಾರೆಂದು ಅನಿಸುತ್ತದೆ ಇವರು ಅದನ್ನು ಇಲ್ಲಿ ತಂದು ಓದಿದ್ದಾರೋ ಏನೋ ಗೊತ್ತಿಲ್ಲ. ಅಂತೂ ಈಗ ನಮ್ಮ ಮುಂದಿಟ್ಟಿದ್ದಾರೆ. ಅದು ನಮ್ಮ ಪ್ರಾಪರ್ಟಿಯಾಗಿದೆ.

ಅಧ್ಯಕ್ಷರು.—ಅವರು ಓದಿದ್ದಾರೆ. ಅದಕ್ಕೆ ದಸ್ತಕತ್ ಬೇರೆ ಬೇಕಾಗಿದೆಯೇ ? He has owned that statement. He has read it and it is on record. So he has to stand by that statement.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈ ಹಿಂದೆ ನಾವೆಲ್ಲಾ ಸಹಿ ಮಾಡುತ್ತಿದ್ದೆವು. ಆದರೂ ಇದೆಲ್ಲಾ ಸ್ಟ್ಯಾಂಗ್ ಅಬ್ಜೆಕ್ಷನ್ ಎಂದು ನಾನು ತೆಗೆದುಕೊಳ್ಳುವುದಿಲ್ಲ; ಸುಮಾರು ಒಂದೂವರೆ ತಿಂಗಳಿನ ಹಿಂದೆ ಕೇಂದ್ರದ ಪೆಟ್ರೋಲಿಯಂ ಸಚಿವರಾಗಿದ್ದಂತಹ ಗುರುಪಾದಸ್ವಾಮಿಯವರು ಬೆಂಗಳೂರಿಗೆ ಬಂದಾಗ ನಾವೆಲ್ಲರೂ ಭೇಟಿ ಮಾಡಿ ರಾಜ್ಯದಲ್ಲಿ ಡೀಸೆಲ್, ಪೆಟ್ರೋಲ್ ಅಭಾವ ಜಾಸ್ತಿ ಇದೆ, ಇದನ್ನು ಮತ್ತೆ ಕಡಿಮೆ ಮಾಡುತ್ತಾರೆಂಬ ಸುದ್ದಿ ಬಂದಿದೆ ಎಂದು ಹೇಳಿದ್ದಕ್ಕೆ ಅವರು ಪ್ರತಿ ವರ್ಷ ಪ್ರತಿ ರಾಜ್ಯಕ್ಕೆ ನಾರ್ಮಲ್ ಆಗಿ ಎಷ್ಟು ಕೊಡುತ್ತೇವೆಯೋ ಅದಕ್ಕಿಂತ ೫ ಪರ್ಸೆಂಟ್ ಹೆಚ್ಚು ಕೊಡುತ್ತೇವೆ, ಅದನ್ನು ಈ ವರ್ಷ ಕೊಡಲಿಲ್ಲ, ಆದರೆ ನಾರ್ಮಲ್ ಆಗಿ ಏನು ಕೊಡುತ್ತಿದ್ದೆವೋ ಅದನ್ನು ಕೊಟ್ಟಿದ್ದೇವೆ ವೆಂದು ಹೇಳಿದರು. ಈ ವಿಚಿತ್ರ ಕೇಂದ್ರದ ಸಚಿವರು ನಿಮ್ಮ ರಾಜ್ಯ ಸರಕಾರದಿಂದ ಈ ರಾಜ್ಯದಲ್ಲಿ ಡೀಸೆಲ್ ಮತ್ತು ಪೆಟ್ರೋಲ್ ಅಭಾವವಿದೆ ಎಂಬ ಬಗ್ಗೆ ಪತ್ರ ಬಂದಿಲ್ಲ ಅನ್ನತಕ್ಕಂಥಾದ್ದನ್ನು ಕೂಡ ಹೇಳಿದರು. ಮಾನ್ಯ ನರಸಿಂಹಮೂರ್ತಿಯವರು ಈ ಖಾತೆ ವಹಿಸಿಕೊಂಡು ಮೂರು ದಿನವಾಗಿದೆ. ಅವರನ್ನು ನಾವು ಟೀಕೆ ಮಾಡುವುದರಲ್ಲಿ ಅರ್ಥವಿಲ್ಲ. ಆದರೆ ಸರಕಾರವೆನ್ನುವುದು ಇದೆಯೆಲ್ಲ ; ಅವರು ಕೇಂದ್ರಕ್ಕೆ ಬರೆದು ಹೀಗೆ ರೈತರಿಗೆ, ಕಾರ್ಮಿಕರಿಗೆ ತೊಂದರೆಯಾಗಿದೆ ಎಂದು ಹೇಳಬೇಕಿತ್ತು. ಡೀಸೆಲ್‌ಗೆಂದು ೨ ಮೈಲಿ ಕ್ಯೂ ನಿಲ್ಲಬೇಕಾಗಿದೆ ಅದು ೧೮-೨೦ ರೂಪಾಯಿ ಜಾಸ್ತಿಯಾಗಿದೆ. ಶಾಸಕರ ಹಣ ತೆಗೆದುಕೊಂಡು ಹೋಗುವುದಕ್ಕೆ ಕೂಡ ಡೀಸೆಲ್ ಇಲ್ಲ ಎನ್ನುವುದೂ ನಿಮ್ಮ ಗಮನಕ್ಕೆ ಬಂದಿಲ್ಲವೇ? ಹೀಗಾದರೂ ಕೂಡ ಕೇಂದ್ರಕ್ಕೆ ಪತ್ರ ಬರೆದಿಲ್ಲವೆಂದು ಹೇಳಿದರೆ ಅರ್ಥ ಏನು ? ಇದನ್ನು ಸದನದಲ್ಲಿ ಎತ್ತಿ ಅದಕ್ಕೆ ಉತ್ತರವಾಗಿ ತಮ್ಮ ಹೇಳಿಕೆಯಲ್ಲಿ ರಾಜ್ಯಕ್ಕೆ ಹಂಚುವ ಡೀಸೆಲನ್ನು ಸ್ವಲ್ಪ ಪೆಚ್ಚಿಸಲು ಕೇಂದ್ರಕ್ಕೆ ಕೋರಲಾಗುವುದು ಎಂದೂ ಹೇಳಿದ್ದೀರಿ ಪತ್ರ ಏಕೆ ಇದುವರೆಗೆ ಬರೆದಿಲ್ಲ, ಇದರಿಂದ ಲಾ ಅಂಡ್ ಆರ್ಡರ್ ಪ್ರಾಬ್ಲಂ ಕ್ರಿಯೇಟ್ ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನೆಲ್ಲಾ ತಿಳಿದುಕೊಂಡು ನಮ್ಮ ಪ್ರಧಾನ ಮಂತ್ರಿಗಳು ಯಾರೇ ಆಗಿರಲೀ ಅವರಿಗೆ ಪತ್ರ ಬರೆಯಬೇಕಿತ್ತು. ಮೆಸ್ಸ್ ಬೆಂಗಾಲ್. ನೀವು ಪ್ರಧಾನಮಂತ್ರಿಗಳನ್ನು ಕಾಂಟ್ಯಾಕ್ಟ್ ಮಾಡಲಿಲ್ಲವೇ ? ಆಲ್ಲಿ ಬೇರೆ ಪಕ್ಷದವರು ಇದ್ದರೂ ಕೂಡ ಅವರು ಕಳಿಸಲಿಲ್ಲವೇ? ಮಾಡುತ್ತೇವೆಂಬ ಮಾತೂ ಕೂಡ ಬರುತ್ತಿಲ್ಲ. ಆ ಕಡೆ ಈ ಕಡೆ ಸದಸ್ಯರು ರಾಜ್ಯದಲ್ಲಿ ಡೀಸೆಲ್ ಅಭಾವ ಹೆಚ್ಚು ಇದೆ ಎಂದು, ಇದರಿಂದ ಸಾಮಾನ್ಯ ಜನರಿಗೆ ತೊಂದರೆಯಾಗಿದೆ ಎಂದು ಹೇಳುತ್ತಿದ್ದಾರೆ. ಇವರಿಂದ ಬ್ಲಾಕ್ ಮಾರ್ಕೆಟಿಂಗ್ ಕ್ರಿಯೇಟ್ ಆಗುತ್ತದೆ, ಲಾ ಅಂಡ್ ಆರ್ಡರ್ ಪ್ರಾಬ್ಲಂ ಪ್ರಾರಂಭವಾಗುತ್ತದೆ. ಆದ್ದರಿಂದ ಪ್ರಧಾನ ಮಂತ್ರಿಗಳ

ನ್ನಾಗಲೀ ಇಲ್ಲವೇ ಸಂಬಂಧಪಟ್ಟ ಮಂತ್ರಿಗಳನ್ನಾಗಲೀ ಇಲ್ಲವೇ ಅಧಿಕಾರಿಗಳನ್ನಾಗಲೀ ನಮ್ಮ ಸರಕಾರ ಕಾಂಟ್ಯಾಕ್ಟ್ ಮಾಡಿ ಈ ಅಭಾವವನ್ನು ತಪ್ಪಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಎಸ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ಸಹ ಇದರ ಬಗ್ಗೆ ಮಾತನಾಡುತ್ತೇನೆ.

ಅಧ್ಯಕ್ಷರು.—ತಾವು ನೋಟೀಸ್ ಕೊಟ್ಟಿದ್ದೀರಾ ?

ಶ್ರೀ ಎಸ್. ಚಿಕ್ಕೇಗೌಡ—ಇದು ವಿಶೇಷವಾಗಿರುವುದರಿಂದ ತಾವು ಅವಕಾಶ ಕೊಡಬೇಕಾಗುತ್ತದೆ

ಶ್ರೀ ಕೆ. ಲಕ್ಕಪ್ಪ.—ಈಗ ಡಿಸ್‌ಕಷನ್‌ಗೆ ಅವಕಾಶ ಮಾಡಿಕೊಡಿ, ಏಕೆಂದರೆ ಕೇಂದ್ರಸರ್ಕಾರದ ಜೊತೆಯಲ್ಲಿ ಸರಿಯಾದ ವ್ಯವಹಾರ ನಡೆದಿದೆಯೋ ಇಲ್ಲವೋ ಎನ್ನುವುದು ಗೊತ್ತಾಗಬೇಕು. ಏತ ಕ್ಕೋಸ್ಕರ ಇವರು ಕೇಂದ್ರಸರ್ಕಾರದ ಮೇಲೆ ಒತ್ತಾಯ ಹಾಕಲಿಲ್ಲ ? ಪುನಃ ಕೇಂದ್ರದ ಮೇಲೆ ಒತ್ತಾಯ ಹಾಕುವುದಕ್ಕೆ ಈ ಬಗ್ಗೆ ಚರ್ಚೆ ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಡಿ. ರೈತರು ಬಹಳ ಕಷ್ಟದಲ್ಲಿದ್ದಾರೆ

ಶ್ರೀ ವಾಟಾಳ್ ನಾಗರಾಜ್.—ದಯಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಇದರ ಪರಿಸ್ಥಿತಿಯ ಗಂಭೀರತೆಯನ್ನು ಅರಿತು ಇದಕ್ಕೆ ಒಂದು ವಿಶೇಷ ಚರ್ಚೆಯನ್ನು ಏರ್ಪಾಡು ಮಾಡೋಣ. ಅದು ಯಾವಾಗ ಏನು ಏನ್ನುವುದನ್ನು ತಮಗೆ ನಾನು ತಿಳಿಸುತ್ತೇನೆ.

ನಿಯಮ ೩೩ಳಿರ ಮೇರೆಗೆ

೧. ವಿಷಯ.—ಖಾಸಗಿ ಪದವಿಪೂರ್ವ ಕಾಲೇಜುಗಳ ಅಧ್ಯಾಪಕರಿಗೆ ವೇತನ ಪಾವತಿಯಲ್ಲಿ ವಿಳಂಬವಾಗುತ್ತಿರುವ ಬಗ್ಗೆ.

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಕರ್ನಾಟಕ ರಾಜ್ಯದ ಸರ್ಕಾರಿ ಪದವಿಪೂರ್ವ ಕಾಲೇಜುಗಳ ಅಧ್ಯಾಪಕರುಗಳಿಗೆ ಕ್ಲುಪ್ತ ಕಾಲದಲ್ಲಿ ಪ್ರತಿ ತಿಂಗಳು ವೇತನ ಪಾವತಿಯಾಗುತ್ತಿದ್ದರೆ, ರಾಜ್ಯದ ಖಾಸಗಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳಿಗೆ ವೇತನ ಪಾವತಿಯಲ್ಲಿ ವಿಪರೀತ ವಿಳಂಬವಾಗುತ್ತಿದೆ ಕೆಲವೊಮ್ಮೆ ನಾಲ್ಕಾರು ತಿಂಗಳುಗಳ ಕಾಲ ವೇತನವಿಲ್ಲದೆ. ಉಪನ್ಯಾಸಕರು ಮತ್ತು ಅವರನ್ನೇ ನಂಬಿದ ಅವರ ಕುಟುಂಬ ವರ್ಗದವರು ಕಷ್ಟಪಡುವಂತಾಗಿದೆ. ಅನ್ಯ ಆದಾಯ ವಿಲ್ಲದ ಶಿಕ್ಷಕ ವರ್ಗ ಇದರಿಂದಾಗಿ ಕೆಲವೊಮ್ಮೆ ಉಪವಾಸ ಬೀಳುವ ಪರಿಸ್ಥಿತಿಯು ಉಂಟಾಗಿದೆ. ರಾಜ್ಯದಲ್ಲಿ ಸರ್ಕಾರಿ ಕಾಲೇಜುಗಳ ಉಪನ್ಯಾಸಕರ ಕಣ್ಣಿಗೆ ಬೆಣ್ಣೆ, ಖಾಸಗಿ ಕಾಲೇಜು ಉಪನ್ಯಾಸಕರ ಕಣ್ಣಿಗೆ ಸುಣ್ಣ, ಎಂಬಂತಹ ನೀತಿಯಿಂದಾಗಿ ಶಿಕ್ಷಕ ವೃಂದಕ್ಕೆ ಅದ ಮನೋಕ್ಷೋಭೆಯಿಂದ ಸಹಸ್ರಾರು ಮಂದಿ ವಿದ್ಯಾರ್ಥಿಗಳು ಸಂಪರ್ಕ ಪಾಠವಿಲ್ಲದೆ ಸಂಕಟಪಡುವ ಪರಿಸ್ಥಿತಿ ಉಂಟಾಗಿದೆ. ಈ ವಿಚಾರ ವನ್ನು ಅತ್ಯಂತ ಶೀಘ್ರವಾಗಿ ಪರಿಶೀಲಿಸಿ ಪ್ರತಿ ತಿಂಗಳು ಕ್ಲುಪ್ತ ಕಾಲದಲ್ಲಿ ವೇತನ ಪಾವತಿಯಾಗುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಜಿ. ಎಸ್. ಆಚಾರ್‌ರವರು ಹೇಳಿದಂತೆ ಕೆಲವು ಖಾಸಗಿ ಪದವಿಪೂರ್ವ ಕಾಲೇಜುಗಳಲ್ಲಿ ವೇತನ ಪಾವತಿ ವಿಳಂಬವಾಗಿದೆ. ಕೆಲವು ಸಂದರ್ಭಗಳಲ್ಲಿ ವಿಳಂಬ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರಿಂದ ಅವರು ಹೇಳಿದಹಾಗೆ ಸರ್ಕಾರಿ ಉಪನ್ಯಾಸಕರ ಕಣ್ಣಿಗೆ ಬೆಣ್ಣೆ, ಖಾಸಗಿ ಕಾಲೇಜುಗಳ ಉಪನ್ಯಾಸಕರುಗಳ ಕಣ್ಣಿಗೆ ಸುಣ್ಣ ಬರದಹಾಗೆ ಸರ್ಕಾರ ಎಲ್ಲ ರೀತಿಯ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತದೆ. ಕೆಲವು ಸಾರಿ ಏನಾಗುತ್ತದೆಂದರೆ, ಪರಿಪತ್ರ ಬರುವಾಗ ಸ್ವಲ್ಪ ವ್ಯತ್ಯಾಸ ಆಗುತ್ತದೆ, ಈಗ ರಿಲೀಸ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಇನ್ನು ಮುಂದೆ ಯಾವುದೇ ರೀತಿಯ ಆತಂಕವಾಗದ ರೀತಿಯಲ್ಲಿ ನೋಡಿಕೊಳ್ಳುತ್ತೇವೆ.

ಅಧ್ಯಕ್ಷರು.—ಮಾನ್ಯ ಜೋಶಿಯವರೇ ತಮ್ಮ ನಿಯಮ ೩೩ಳಿನ್ನು ರೆವಿನ್ಯೂ ಮಂತ್ರಿಗಳಿಗೆ ವರ್ಗಾವಣೆ ಮಾಡಲಾಗಿದೆ. ಆದ್ದರಿಂದ ಇದನ್ನು ಇನ್ನೊಂದಂ ದಿವಸ ತೆಗೆದುಕೊಳ್ಳುತ್ತೇನೆ. ಮಾನ್ಯ ಪಿ.ಸಿ. ಸಿದ್ಧನಗೌಡರು ಈಗ ಸಭೆಯಲ್ಲಿ ಇಲ್ಲ.